VIJAYAKUMAR KANNUR Digitally signed by VIJAYAKUMAR KANNUR Date: 2026.07.07 16:35:11 +0530



**ಪ್ರಧನಾ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 07.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಆರ್ ಟಿ ವಕೀಲರಿಂದ**

ನಾನು ಹಾಜರು ಪಡಿಸಿರುವ ನಿಪಿ 34 ಮತ್ತು 35 ರ ದಾಖಲೆಯಲ್ಲಿ ಆರೋಪಿ ಹಣ ನೀಡಿದ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಹೆಸರಿನಲ್ಲಿ ಒಟ್ಟು 12 ಎಕರೆ ಜಮೀನು ಇರುವುದು. ಸದರಿ ಜಮೀನುಗಳು ಹಲಗಿ ಗ್ರಾಮದ ಸೀಮಾದ ವ್ಯಾಪ್ತಿಯಲ್ಲಿ ಇರುವವು. ಸದರಿ ಜಮೀನಿನಲ್ಲಿ ಕಬ್ಬಿನ ಬೆಳೆ ಬೆಳೆಯುತ್ತೇವೆ. ಇದರಿಂದ ರೂ. 10 ಲಕ್ಷ ಆದಾಯ ಬರುವುದು. ನಮ್ಮದು ಒಟ್ಟು ಕುಟುಂಬವಿರುವುದು. ಖರ್ಚು ವೆಚ್ಚ ತೆಗೆದು 7-8 ಲಕ್ಷ ಹಣ ಉಳಿಯುವುದು. ನನ್ನ ಎಸ್ ಬಿ ಐ ಬ್ಯಾಂಕಿನ ಒಂದು ವರ್ಷದ ಅವಧಿಯ ಸ್ಟೇಟಮೆಂಟ್ ನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆ ಒಂದು ವರ್ಷದ ಅವಧಿಯ ಸ್ಟೇಟಮೆಂಟ್ ನಲ್ಲಿ ಆರೋಪಿಗೆ ಈ ದೂರಿನಲ್ಲಿ ಹೇಳಿರುವಂತೆ ರೂ. 10 ಲಕ್ಷ ಹಣ ನೀಡಿದ ಬಗ್ಗೆ ಉಲ್ಲೇಖವಿರುವುದಿಲ್ಲ, ಆ ಕಾರಣಕ್ಕಾಗಿ ನಾನು ಆ ಒಂದು ವರ್ಷದ ಅವಧಿಯ ಸ್ಟೇಟಮೆಂಟ್ ನ್ನು ಉದ್ದೇಶಪೂರಕವಾಗಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ಯಮನಪ್ಪ ನಾಗವ್ವಗೋಳ ಎಂಬ ಹೆಸರಿನ ವ್ಯಕ್ತಿ ನಮ್ಮ ಗ್ರಾಮದವನಾಗಿದ್ದು, ಆತನ ಪರಿಚಯವಿರುವುದು. ನನ್ನ ಮತ್ತು ಯಮನಪ್ಪನ ಮಧ್ಯೆ ಯಾವುದೇ ವ್ಯವಹಾರ ಇರುವುದಿಲ್ಲ, ಆದರೆ ಆತನ ಪರಿಚಯವಿರುವುದು. ನನ್ನ ಮತ್ತು ಆರೋಪಿಯ ಮಧ್ಯೆ ಈ ದೂರಿನಲ್ಲಿ ಹೇಳಿರುವಂತೆ ಯಾವುದೇ ವ್ಯವಹಾರವಾಗಿರುವುದಿಲ್ಲ. ಆರೋಪಿ ಯಮನಪ್ಪ ನಾಗವ್ವಗೋಳ ಇತನಿಗೆ ನೀಡಿರುವ ಸಹಿ ಮಾಡಿರುವ ಖುಲ್ಲಾ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಈ ದೂರಿನಲ್ಲಿ ಹೇಳಿರುವಂತೆ ಯಾವುದೇ ವ್ಯವಹಾರವಾಗದೆ ಇದ್ದರೂ ಸಹಿತ ಯಮನಪ್ಪನಿಗೆ ನೀಡಿದ ಚೆಕ್ ನ್ನು

ದುರುಪಯೋಗಪಡಿಸಿಕೊಂಡು ನಾನು ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ